eVidyaloka
To Educate - Anywhere Anytime

ಅಭ್ಯಾಸ ಪತ್ರಿಕೆಯ ಸಂಖ್ಯೆ : WT_7S_9.4_DSERT		ಕರ್ನಾಟಕ ಮಂಡಳಿ
ತರಗತಿ : 7	ವಿಷಯ : ವಿಜ್ಞಾನ	ದಿನಾಂಕ : 23/07/2021
ಅಧ್ಯಾಯದ ಕ್ರಮ ಸಂಖ್ಯೆ ಹಾಗು ಹೆಸರು : 9 – ಮಣ್ಣು		
ಉಪ ಅಧ್ಯಾಯ : ಮಣ್ಣಿನಲ್ಲಿ ತೇವಾಂಶ ಮತ್ತು ಮಣ್ಣು ನೀರನ್ನು ಹೀರುವುದು.		

ವಿಭಾಗ - ೧

ಪ್ರಶ್ನೆ ೧)	ಸರಿ ಇರುವುದನ್ನು T ಎಂದು ಅಥವಾ ತಪ್ಪಾಗಿರುವುದನ್ನು F ಎಂದು ಗುರುತಿಸಿ.
(ಕ)	ಬೇಸಿಗೆ ಕಾಲದಲ್ಲಿ ಮಣ್ಣಿನ ತೇವಾಂಶವು ಆವಿಯಾಗುತ್ತದೆ .
ಉತ್ತರ	T
(ಖ)	1 ಮೀ. ಲಿ ನೀರು 1 ಗ್ರಾಂ ಸಮ ಅಲ್ಲ.
ಉತ್ತರ	F ಕಾರಣ : 1 ಮೀ. ಲಿ ನೀರು 1 ಗ್ರಾಂಕೆ ಸಮ.
ಪ್ರಶ್ನೆ ೨) ಕ)	ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. ದ್ರವ್ಯರಾಶಿಯ ಮೂಲಮಾನವು _____ ಆಗಿದೆ.
	ಅ) ಗ್ರಾಂ ಆ) ಕಿಲೋಗ್ರಾಂ ಇ) ಅ ಮತ್ತು ಆ ಎರಡೂ ಈ) ಇವುಗಳಲ್ಲಿ ಯಾವುದು ಇಲ್ಲ
ಉತ್ತರ	ಇ) ಅ ಮತ್ತು ಆ ಎರಡೂ
ಪ್ರಶ್ನೆ ೩) ಕ) ಉತ್ತರ ಖ) ಉತ್ತರ	ಬಿಟ್ಟ ಸ್ಥಳಗಳನ್ನು ತುಂಬಿಸಿ :- ಮಣ್ಣಿನ ಸಂರಕ್ಷಣಾ ಕ್ರಮಗಳು ಮುಖ್ಯವಾಗಿ _____ ರಕ್ಷಿಸುವ ಗುರಿಯನ್ನು ಹೊಂದಿದೆ. ಮಣ್ಣಿನ ಸಂರಕ್ಷಣಾ ಕ್ರಮಗಳು ಮುಖ್ಯವಾಗಿ ಮೇಲ್ಮಣ್ಣು ರಕ್ಷಿಸುವ ಗುರಿಯನ್ನು ಹೊಂದಿದೆ. _____ ಮಣ್ಣು ನೀರಿನಲ್ಲಿ ಅಮಾನತುಗೊಂಡಾಗ ಘರ್ಷಣೆಯ ದ್ರಾವಣವನ್ನು ರೂಪಿಸುತ್ತದೆ. ಜೇಡಿ ಮಣ್ಣು ನೀರಿನಲ್ಲಿ ಅಮಾನತುಗೊಂಡಾಗ ಘರ್ಷಣೆಯ ದ್ರಾವಣವನ್ನು ರೂಪಿಸುತ್ತದೆ.

ವಿಭಾಗ – ೨

ಪ್ರಶ್ನೆ ೪)	ಇವುಗಳನ್ನು ಹೊಂದಿಸಿ ಬರೆಯಿರಿ. ಕ) ಮಣ್ಣಿನಿಂದ ನೀರಿನ ಹೀರುಕೊಳ್ಳುವಿಕೆ – ನೀರಿನ ಪ್ರಮಾಣ(ಮೀ. ಲಿ)/ ಇಂಗುವ ಕಾಲ(ನಿಮಿಷ)

eVidyaloka
To Educate - Anywhere Anytime

	ಖ) ಮಣ್ಣಿನಲ್ಲಿ ನೀರು ಇಂಗುವ ದರ – (U – V)ಮಿಲಿ
ಉತ್ತರ	ಕ) ಮಣ್ಣಿನಿಂದ ನೀರಿನ ಹೀರುಕೊಳ್ಳುವಿಕೆ – (U – V) ಮಿಲಿ ಖ) ಮಣ್ಣಿನಲ್ಲಿ ನೀರು ಇಂಗುವ ದರ – ನೀರಿನ ಪ್ರಮಾಣ(ಮಿಲಿ) / ಇಂಗುವ ಕಾಲ(ನಿಮಿಷ)
ಪ್ರಶ್ನೆ ೫) ಕ) ಉತ್ತರ	ಕೆಳಗಿರುವುದನ್ನು ಸರಿಯಾಗಿ ಮರುಹೊಂದಿಸಿ. ಅತ್ಯಂತ ಮಣ್ಣು ನೈಸರ್ಗಿಕ ಸಂಪನ್ಮೂಲವಾಗಿದೆ ಪ್ರಮುಖ. ಮಣ್ಣು ಅತ್ಯಂತ ಪ್ರಮುಖ ನೈಸರ್ಗಿಕ ಸಂಪನ್ಮೂಲವಾಗಿದೆ.
ಖ) ಉತ್ತರ	ಒಂದು ಪದದಲ್ಲಿ ಉತ್ತರಿಸಿ: ಹವಾಮಾನದ ಎರಡು ಘಟಕಗಳು • ಗಾಳಿ • ನೀರು
	ವಿಭಾಗ – ೩
ಪ್ರಶ್ನೆ ೬) ಉತ್ತರ	ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:- ಮಣ್ಣು ಹೀರುವ ನೀರಿನ ಪ್ರಮಾನವನ್ನು ನೀವು ಹೇಗೆ ಕಂಡುಹಿಡಿಯುತ್ತೀರಿ ಎಂದು ಚಿತ್ರದೊಂದಿಗೆ ತಿಳಿಸಿ ಒಂದು ಪ್ಲಾಸ್ಟಿಕ್ ಆಲಿಕೆಯನ್ನು ತೆಗೆದುಕೊಳ್ಳಿ. ಒಂದು ಸೋಸು ಕಾಗದ (ಅಥವಾ ವಾರ್ತ ಪ್ರತ್ರಿಕೆಯ ಕಾಗದದ ತುಂಡು) ವನ್ನು ತೆಗದುಕೊಳ್ಳಿ. ಅದನ್ನು ಮಡಚಿ, ಆಲಿಕೆಯ ಒಳಗೆ ಇಡಿ. ಸುಮಾರು 50ಗ್ರಾಂ ನಷ್ಟು ಪುಡಿಯಾದ ಒಣ ಮಣ್ಣನ್ನು ತೂಕ ಮಾಡಿ, ಆಲಿಕೆಯೊಳಗೆ ಸುರಿಯಿರಿ. ಉಳತೆ ಜಾಡಿಯಲ್ಲಿ ನಿರ್ದಿಷ್ಟ ಪ್ರಮಾಣದ ನೀರನ್ನು ಅಳತೆ ಮಾಡಿ. ಹನಿಹನಿಯಾಗಿ ಮಣ್ಣಿನ ಮೇಲೆ ಸುರಿಯಿರಿ. ಇದಕ್ಕಾಗಿ ಒಂದು ಹನಿಗವನ್ನು ಬಳಸಬಹುದು. ಎಲ್ಲಾ ನೀರು ಒಂದೇ ಜಾಗದಲ್ಲಿ ಬೀಳದಿರಲಿ. ನೀರನ್ನು ಮಣ್ಣಿನ ಎಲ್ಲಾ ಭಾಗಕ್ಕೂ ಹಾಕಿ. ನೀರು ಆಲಿಕೆಯಿಂದ ಕೆಳಗೆ ತೊಟ್ಟಿಕ್ಕಲು ಪ್ರಾರಂಭವಾಗುವವರೆಗೂ ನೀರನ್ನು ಹಾಕುತ್ತಿರಿ. ಆಳತೆ ಜಾಡಿಯಲ್ಲಿ ಉಳಿದ ನೀರಿನ ಪ್ರಮಾಣವು ಆರಂಭದ ನೀರಿನ ಪ್ರಮಾಣದಿಂದ ಕಳೆಯಿರಿ. ಇದು ಮಣ್ಣು ಹಿಡಿದಿಟ್ಟುಕೊಂಡ ನೀರಿನ ಪ್ರಮಾಣ. ಮಣ್ಣಿನಲ್ಲಿ ನೀರು ಹೀರುಕೊಳ್ಳುವಿಕೆ ಸೂತ್ರ = (U – V)ಮಿಲಿ

	
ಪ್ರಶ್ನೆ ೭)	ಮಣ್ಣಿನ ತೇವಾಂಶವನ್ನು ಚಿತ್ರದೊಂದಿಗೆ ನಿರೂಪಿಸಿ.
ಉತ್ತರ	ಒಂದು ಗಟ್ಟಿ ಗಾಜಿನ ಪ್ರನಾಳವನ್ನು ತಗೆದುಕೊಳ್ಳಿ. ಅದರಲ್ಲಿ ಎರಡು ಚಮಚ ಮಣ್ಣಿನ ಮಾದರಿಯನ್ನು ಹಾಕಿ. ಅದನ್ನು ಜ್ವಾಲೆಯ ಮೇಲೇರಿಸಿ ಕಾಯಿಸಿ ಮತ್ತು ಅದನ್ನು ಗಮನಿಸಿ. ಕಾಯಿಸುವದರಿಂದ ಏನಾಗುತ್ತದೆ ಎಂಬುವುದನ್ನು ನಾವು ಕಂಡು ಹಿಡಿಯಬೇಕು. ಕಾಯಿಸಿದಾಗ ತೇವಾಂಶಯುಕ್ತ ಮಣ್ಣಿನಲ್ಲಿರುವ ನೀರು ಆವಿಯಾಗಿ ಮೇಲೆ ಚಲಿಸಿ ಪ್ರನಾಳದ ಮೆಲ್ಭಗದ ತಣ್ಣನೆಯ ಒಳಗೋಡೆಯಲ್ಲಿ ಸಾಂದ್ರೀಕಾರಣಗೊಳ್ಳುತ್ತದೆ. ಮಣ್ಣನ್ನು ಕಾಯಿಸಿದ ನಂತರ ಅದನ್ನು ಪ್ರನಾಳದಿಂದ ಹೊರತೆಗೆಯಿರಿ. ಅದನ್ನು ಕಾಯಿಸದೆ ಇರುವ ಮಣ್ಣಿನೊಂದಿಗೆ ಹೋಲಿಸಿ. ಇವೆರಡರ ನಡುವಣ ವ್ಯತ್ಯಾಸವನ್ನು ಗುರ್ತಿಸಿಕೊಳ್ಳಿ.